ಹೋದರೆ ಸಮುದ್ರದ ಕೊರೆತ ಜೋರಾಗಿ ಭಾರಿ ಹಾನಿಯಾಗಲಿದೆ. ಅಳಿವೆ ಬಾಗಿಲಲ್ಲಿ ಹೂಗೆ ರಾಶಿ ಬೀಳುವುದು ಕೂಡ ಇದರಿಂದ ನಿವಾರಣೆಯಾಗುತ್ತದೆ. 'ಬ್ರೇಕ್‌ವಾಟರ್' ಕೆಲಸ ಜೋರಾಗಿ ನಡೆಯುವುದು ಅತ್ಯಗತ್ಯವಾಗಿರುತ್ತದೆ. ಅಧಿಕಾರಿಗಳು ಈ ಬಗ್ಗೆ ವಿಶೇಷ ಗಮನ ಕೊಡುವುದು ಪ್ರಾಮುಖ್ಯವಾಗಿದೆ. ಈ ಕುರಿತು ಲೋಕೋಪಯೋಗಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ವಸಂತ ಸಾಲ್ಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯಮಂತ್ರಿ) :- ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆಯನ್ನು ಓದುತ್ತೇನೆ.

ಹಳೇ ಮಂಗಳೂರು ಬಂದರಿನಲ್ಲಿ, ಅಲೆತಡೆಗೋಡೆ ನಿರ್ಮಾಣಕ್ಕೆ ಪರಿಷ್ಕೃತ ಅಂದಾಜು ಪಟ್ಟಿ ೧೮೫.೧೩ಲಕ್ಷ ರೂ.ಗಳಾಗಿದ್ದು, ಪೂರ್ವ ನಿರ್ಧಾರಿತ ಗುತ್ತಿಗೆದಾರರಿಗೆ (ಮೆ: ಜ್ಯೋತಿ ಕನ್‌ಸ್ಟ್ರಕ್ಷನ್ ಕಂ.) ಅವರ ಟೆಂಡರ್ ಮೊತ್ತ ೧೫೯.೭೩ಲಕ್ಷ ರೂ.ಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ ೫೮ ಪಿ.ಎಸ್.ಸಿ ೮೯, ದಿನಾಂಕ ೧೦-೭-೯೧ ರಲ್ಲಿ ಒಪ್ಪಿಕೊಳ್ಳಲಾಗಿತ್ತು. ಅದರಲ್ಲಿ ಉತ್ತರ ಅಲೆತಡೆಗೋಡಿ (ಬೆಂಗ್ರೆ) ಮತ್ತು ದಕ್ಷಿಣ ಅಲೆತಡೆಗೋಡೆ (ಉಳ್ಳಾಲ) ದಲ್ಲಿದ್ದು ಅನುಕ್ರಮವಾಗಿ ದಿ:೪-೧-೯೯೧ ಮತ್ತು೨೧-೫-೯೯೧ರಲ್ಲಿ ನಿವೇಶನ ಹಸ್ತಾಂತರಿಸಲಾಗಿ ದಿ:೩-೧-೯೯೩ ಮತ್ತು ೨೦-೫-೯೯೩ರ ಮೇರೆಗೆ ಕರಾರಿನಂತೆ ಕೆಲಸವನ್ನು ಪೂರ್ಣಗೊಳಿಸಬೇಕಾಗಿದೆ.

ಬೆಂಗ್ರೆ ಮತ್ತು ಉಳ್ಳಾಲ ಬದಿಯ ಅಲೆತಡೆಗೋಡೆ ಕಾಮಗಾರಿಯು ಕೆಲವೊಂದು ಅಡಚಣೆಗಳಿಂದ ಹಾಗೂ ಅನಿವಾರ್ಯ ಕಾರಣಗಳಿಂದ ನಿಧಾನಿಸಿರುತ್ತದೆ. ಬೆಂಗ್ರೆ ಬದಿಯಲ್ಲಿ ಕಾಮಗಾರಿಯು ಪ್ರಾರಂಭಿಸಿದ ನಂತರ ಕಾಮಗಾರಿಯನ್ನು ಗುತ್ತಿಗೆದಾರರು ಸ್ಥಗಿತಗೊಳಿಸಿದರು. ಗುತ್ತಿಗೆದಾರರು ದೂರದ ಗಣಿಯಿಂದ ಕಲ್ಲು ತರಬೇಕಾದಲ್ಲಿ ಹೆಚ್ಚುವರಿ ಸಾಗಣೆ ದರ ಮಂಜೂರಾತಿಗಾಗಿ ಕೇಳಿಕೆ ಸಲ್ಲಿಸಿದರು. ಇದು ಇಲಾಖೆಗೆ ಅಸ್ವೀಕಾರಾರ್ಹವಾದುದರಿಂದ ಈ ಗುತ್ತಿಗೆಯನ್ನು ಅವರಿಂದ ಹಿಂದಕ್ಕೆಪಡೆದು ಪ್ರತ್ಯೇಕ ಗುತ್ತಿಗೆ ನಿರ್ವಹಣೆಗಾಗಿ ೨೧೦.೩೧ ಲಕ್ಷ ರೂ. ಪ್ರಸ್ತಾವಣೆ ಈಗ ಸರಕಾರದ ಮುಂದೆ ಬಂದಿದ್ದು ಇದು ಈಗ ಸರಕಾರದ ಪರಿಶೀಲನೆಯಲ್ಲಿದೆ.

ಉಳ್ಳಾಲದ ಬದಿಯಲ್ಲಿ ಕಾಮಗಾರಿಯನ್ನು ಗುತ್ತಿಗೆದಾರರು ನಿಧಾನಗತಿಯಲ್ಲಿ ನಡೆಸುತ್ತಿದ್ದು, ಶೀಘ್ರಗತಿಯಲ್ಲಿ ಮಾಡಿ ಮುಗಿಸಲು ಗುತ್ತಿಗೆದಾರರಿಗೆ ಆಗಾಗ ಎಚ್ಚರಿಕೆ ನೋಟೀಸು ನೀಡಲಾಗುತ್ತಿದೆ. ಗುತ್ತಿಗೆ ಕರಾರಿನಂತೆ ೨೦-೫-೯೩ ರ ವೇಳೆಗೆ ಪೂರ್ಣ ಗೊಳಿಸಬೇಕಾಗಿರುತ್ತದೆ. ಜನವರಿ ೧೯೯೩ ರವರೆಗೆ ಸುಮಾರು ೨೪.೫೦ ಲಕ್ಷ ರೂ.ವೆಚ್ಚ ವಾಗಿರುತ್ತದೆ. ಬಾಕಿ ವೆಚ್ಚ ಸುಮಾರು ೪೯.೬೧ ಲಕ್ಷ ರೂ.ಆಗಿರುತ್ತದೆ. ಈ ಭಾಗದ ಕಾಮಗಾರಿಯನ್ನು ಡಿಸೆಂಬರ್ '೯೩ರ ವೇಳೆಗೆ ಪೂರ್ಣಗೊಳಿಸಲಾಗುವುದು.

ಎರಡು ಅಲೆತಡೆಗೋಡೆಗಳಿಗೆ ಒಟ್ಟು ಸುಮಾರು ೨೬೦.೬೧ ಲಕ್ಷ ರೂ. ಬೇಕಾಗಿರುತ್ತದೆ.

ವಿಷಯ(೪):- ಮಂಡ್ಯ ನಗರದಲ್ಲಿ ನ್ಯಾಯ ಬೆಲೆ ಅಂಗಡಿಗಳು ಮತ್ತು ಸೀಮೆಎಣ್ಣೆ ವಿತರಣೆ.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):- ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರದಲ್ಲಿ ನ್ಯಾಯಬೆಲೆ ಅಂಗಡಿಗಳ ಮತ್ತು ಸೀಮೆಎಣ್ಣೆ ಹಾರ್ಕರ್‌ಮುಖಾಂತರ ಸಾರ್ವಜನಿಕರಿಗೆ ವಿತರಣೆ ಮಾಡಲಾಗುತ್ತಿದ್ದ ಸೀಮೆಎಣ್ಣೆ ಪ್ರಮಾಣವನ್ನು ಏಕಾಏಕಿ ಕಡಿತಗೊಳಿಸಲಾಗಿದೆ. ಈ ಕಡಿತದಿಂದಾಗಿ ನಗರದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿ ಸಮಸ್ಯೆಯಾಗಿದೆ ಹಾಗೂ ಇದು ದೈನಂದಿನ ಜೀವನದ ಮೇಲೆ ಪರಿಣಾಮ ಬೀರಿದೆ. ಈ ಹಿಂದೆ ನಗರಕ್ಕೆ ವಿತರಣೆ ಮಾಡಲು ನಿಗದಿಯಾಗಿದ್ದ ಪ್ರಮಾಣವನ್ನೇ ಪುನಃ ಮಂಡ್ಯ ನಗರಕ್ಕೆ ನಿಗದಿ ಮಾಡಬೇಕೆಂದೂ ಹಾಗೂ ಈ ಪ್ರಮಾಣವನ್ನು ಯಾವ ಕಾರಣದಿಂದಾಗಿ ಕಡಿತ ಮಾಡಲಾಯಿತೆಂದು ತಿಳಿಸಬೇಕೆಂದೂ,

ಮಂಡ್ಯ ನಗರದ ಸೀಮೆಎಣ್ಣೆ ಸರಬರಾಜಿನ ಪರಿಸ್ಥಿತಿಯನ್ನು ಈ ಹಿಂದೆ ಇದ್ದಂತೆ, ತುರ್ತಾಗಿ ಸುಧಾರಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಡಾ. ಹೆಗ್ಗಪ್ಪ ಡಿ ಲಮಾಣಿ (ಆಹಾರ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೇ ಮಂಡ್ಯ ಜಿಲ್ಲೆಗೆ ಪ್ರತಿ ತಿಂಗಳು ೧೧ಳಂ ಕಿಲೋ ಲೀಟರ್ ಸೀಮೆಎಣ್ಣೆ ಹಂಚಿಕೆ ಮಾಡಲಾಗುತ್ತಿದೆ. ಈ ಹಂಚಿಕೆಯಲ್ಲಿ ಮಂಡ್ಯ ಪಟ್ಟಣದ ಕಾರ್ಡುದಾರರಿಗೆ ೬ ಲೀ. ಹಾಗೂ ಗ್ರಾಮಾಂತರ ಪ್ರದೇಶದ ಕಾರ್ಡುದಾರರಿಗೆ ೩ ಲೀ.ನಂತೆ ಜಿಲ್ಲಾಧಿಕಾರಿಗಳು ಹಂಚಿಕೆ ಮಾಡುತ್ತಾರೆ. ಕಾರ್ಡುದಾರರಿಗೆ ನೀಡಲಾಗುತ್ತಿರುವ ಈ ಪ್ರಮಾಣದಲ್ಲಿ ಯಾವುದೇ ಕಡಿತ ಇರುವುದಿಲ್ಲ. ಸೀಮೆಎಣ್ಣೆ ಎತರಣೆಯನ್ನು ಸುವ್ಯವಸ್ಥಿತಗೊಳಿಸಲಾಗಿದೆ ಹಾಗೂ ಪಡಿತರ ಚೀಟಿಗಳ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತಿದೆ. ಮಂಡ್ಯ, ಪಟ್ಟಣದಲ್ಲಿ ೨೫,೮೦೨ ಪಡಿತರ ಚೀಟಿಗಳಿದ್ದು ಪ್ರತಿ ಕಾರ್ಡಿಗೆ ೬ ಲೀಟರ್‌ನಂತೆ (ಹಾಸ್ಟೆಲ್ಲುಗಳನ್ನೂ ಸೇರಿ) ಎತರಣೆ ಮಾಡಲು ೧೬೪ ಕಿಲೋ ಲೀಟರ್ ಸೀಮೆಎಣ್ಣೆಯನ್ನು ಹಂಚಿಕೆ ಮಾಡಲಾಗಿದೆ.

ರಾಜ್ಯಕ್ಕೆ ಹಂಚಿಕೆಯಾಗುತ್ತಿರುವ ಸೀಮೆಎಣ್ಣೆ ಪ್ರಮಾಣ ತಕ್ಕಷ್ಟು ಆಗಿರುವುದಿಲ್ಲ. ಪ್ರತಿ ತಿಂಗಳಿಗೆ ೬೭,೦೦೦ ಕಿಲೋ ಲೀಟರ್ ಸೀಮೆಎಣ್ಣೆ ಎತರಣೆ ಅವಶ್ಯಕವಿದ್ದು, ಇದಕ್ಕೆದುರಾಗಿ ಕೇವಲ ೪೭,೫೧೩ ಕಿಲೋ ಲೀಟರ್ ಮಾತ್ರ ಕೇಂದ್ರ ಸರ್ಕಾರದಿಂದ ಹಂಚಿಕೆ ಆಗುತ್ತಲಿದೆ. ಆದುದರಿಂದ ಜಿಲ್ಲೆಗಳು ಸಾಕಷ್ಟು ಪ್ರಮಾಣದ ಸೀಮೆಎಣ್ಣೆಯನ್ನು ಪಡೆಯುತ್ತಿಲ್ಲ. ೧೯೯೧ ರ ನವೆಂಬರ್ ತಿಂಗಳಿನಿಂದ ರಾಜ್ಯಕ್ಕೆ ಒಂದೇ ಪ್ರಮಾಣದ ಹಂಚಿಕೆಯಾಗುತ್ತಿದ್ದು, ಯಾವುದೇ ಬದಲಾವಣೆ ಇಲ್ಲ. ಆದರೆ ಪಡಿತರ ಚೀಟಿಗಳು ಹೆಚ್ಚಿಗೆ ಆಗುತ್ತಲಿವೆ. ಆದುದರಿಂದ ರಾಜ್ಯದಲ್ಲಿ ಸೀಮೆಎಣ್ಣೆ ಕೊರತೆ ಉಂಟು. ಸೀಮೆಎಣ್ಣೆಯ ಹಂಚಿಕೆ ಪ್ರಮಾಣವನ್ನು ಹೆಚ್ಚಿಸುವಂತೆ ಕೇಂದ್ರಕ್ಕೆ ರಾಜ್ಯ ಸರ್ಕಾರವು ಮೇಲಿಂದ ಮೇಲೆ ಮನವಿ ಮಾಡುತ್ತಲೇ ಇದೆ.

(೫) ಗಂಗಾವತಿ ತಾಲ್ಲೂಕಿನ ಕನಕಗಿರಿ ಕ್ಷೇತ್ರದ ಗ್ರಾಮಗಳಲ್ಲಿ ವಿದ್ಯುತ್ ಅಭಾವ.

ಶ್ರೀ ಎಂ.ಮಲ್ಲಿಕಾರ್ಜುನ (ಕನಕಗಿರಿ):- ಮಾನ್ಯ ಅಧ್ಯಕ್ಷರೇ, ಗಂಗಾವತಿ ತಾಲ್ಲೂಕು ಹಾಗೂ ಕನಕಗಿರಿ ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ಅಭಾವದಿಂದ ರೈತರು ಸಾಕಷ್ಟು ಕಂಗಾಲಾಗಿ, ಬೆಳೆದ ಬೆಳೆ ಬಾರದೇ ಒಣಗಿ ಹೋಗುತ್ತಿದೆ. ಪೈರಿನಲ್ಲಿ ಒಂದಂಶವಾದರೂ ರೈತರಿಗೆ ಸಿಗುತ್ತಿಲ್ಲ. ಈ ವಿಷಯದಲ್ಲಿ ಸರ್ಕಾರದವರು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಓಂಪ್ರಕಾಶ್ ಕಣಗಲಿ(ನೀರಾವರಿ ರಾಜ್ಯ ಸಚಿವರು) (ಉಪ ಮುಖ್ಯಮಂತ್ರಿಗಳ ಪರವಾಗಿ):- ಗಂಗಾವತಿ ತಾಲ್ಲೂಕಿನ ಕನಕಗಿರಿ ಕ್ಷೇತ್ರದ ಗ್ರಾಮಗಳಲ್ಲಿ ಸ್ವಲ್ಪ ದಿನಗಳ ಹಿಂದೆ ವಿದ್ಯುತ್ ಸರಬರಾಜಿನಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಯ ಉಂಟಾಗಿತ್ತು. ಇದಕ್ಕೆ ಮುಖ್ಯ ಕಾರಣ, ಗಂಗಾವತಿಯಲ್ಲಿರುವ ೧೧೦:೧೧ ಕೆ.ವಿ.ಉಪ ವಿದ್ಯುತ್ ಕೇಂದ್ರದಲ್ಲಿರುವ ಪವರ್ ಟ್ರಾನ್ಸ್‌ಫಾರ್ಮರ್‌ಗಳು 'ಓವರ್ ಲೋಡ್ ಆಗುತ್ತಿದ್ದರಿಂದ ಓವರ್‌ಲೋಡನ್ನು ತಪ್ಪಿಸಲು ಅನಿಯಮಿತ ಲೋಡ್ ಶೆಡ್ಡಿಂಗನ್ನು ನಿರ್ವಹಿಸಬೇಕಾಯಿತು. ಆದರೆ ಈಗ ಈ ಕ್ಷೇತ್ರದ ಕೆಲವು ಗ್ರಾಮಗಳಿಗೆ ಕರಟಗಿಯಲ್ಲಿರುವ ೧೧೦:೧೧ ಕೆ.ವಿ. ಉಪ ವಿದ್ಯುತ್ ಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ. ಇದರಿಂದ, ಗಂಗಾವತಿಯಲ್ಲಿರುವ ೧೧೦:೧೧ಕೆ.ವಿ.ಉಪ ವಿದ್ಯುತ್ ಕೇಂದ್ರದ ಟ್ರಾನ್ಸ್‌ಫಾರ್ಮರ್‌ಗಳ ಓವರ್ ಲೋಡ್ ಆಗುವಿಕೆಯನ್ನು ತಪ್ಪಿಸಲಾಗಿದೆ. ಹೀಗಾಗಿ ವಿದ್ಯುತ್ ಸರಬರಾಜಿನ ಅಡಚಣೆಯ ಪ್ರಮಾಣ ಬಹಳಷ್ಟು ಕಡಿಮೆಯಾಗಿದೆ. ಅಲ್ಲದೇ ಗಂಗಾವತಿಯಲ್ಲಿರುವ ೧೧೦:೧೧ ಕೆ.ವಿ. ಉಪ ವಿದ್ಯುತ್ ಕೇಂದ್ರದಲ್ಲಿ ಇನ್ನು ಐದು ಹೊಸ ೧೧ ಕೆ.ವಿ. ಫೀಡರುಗಳನ್ನು ಹಾಕಿ ಲೋಡನ್ನು